ಕರ್ನಾಟಕ ವಿಧಾನ ಸಭೆ

ಬುಧವಾರ, ೭ನೇ ಸೆಪ್ಟೆಂಬರ್ ೧೯೮೩

ವಿಧಾನ ಸಭೆಯು ವಿಧಾನ ಸೌಧದ ಸಭಾಂಗಣದಲ್ಲಿ ಹನ್ನೊಂದು ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ಡಿ. ಬಿ. ಚಂದ್ರೇಗೌಡ) ಅಧ್ಯಕ್ಷ ಪೀಠವನ್ನಲಂಕರಿಸಿದರು.

ಪ್ರಶ್ನೋತ್ತರಗಳು

ಚುಕ್ಕೆಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ಗುಲ ರ್ಗ ಜಿಲ್ಲೆಯಲ್ಲಿರುವ ಸರ್ಕಾರಿ ಹಾಗೂ ಖಾಸಗಿ ಪದವೀ ಕಾಲೇಜುಗಳು

೨೮೪ (೮೭) ಶ್ರೀ ಕೆ. ಬಿ. ಶಾಣಪ್ಪ (ಶಹಬಾದ್) .—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ಗುಲ್ಬರ್ಗಾ ಜಿಲ್ಲೆಯಲ್ಲಿರುವ ಸರ್ಕಾರಿ ಮತ್ತು ಖಾಸಗೀ ಕಾಲೇಜುಗಳ ಸಂಖ್ಯೆ ಎಷ್ಟು ?

ಆ) ಸರ್ಕಾರಿ ಕಾಲೇಜುಗಳಿಗೆ ಬೇಕಾದ ಶಿಕ್ಷಕರ ಸಂಖ್ಯೆ ಎಷ್ಟು ?

ಈಗ ಎಷ್ಟು ಹುದ್ದೆಗಳನ್ನು ಸರ್ಕಾರದವರು ತುಂಬಿದ್ದಾರೆ.

ಶ್ರೀ ಬಿ. ರಾಚಯ್ಯ (ಮಾನ್ಯ ಶಿಕ್ಷಣ ಮಂತ್ರಿಗಳು).—

೪ ಸರ್ಕಾರಿ ಕಾಲೇಜುಗಳು.

೮ ಖಾಸಗೀ ಕಾಲೇಜುಗಳು.

ಈ ಕೆಳಕಂಡಂತೆ ಮಂಜೂರಾತಿ ನೀಡಲಾಗಿದೆ.

ಕ್ರಮ ಸಂಖ್ಯೆ	ಕಾಲೇಜುಗಳು	ಪ್ರೊಫೆಸರ್	ರೀಡರ್	ಲೆಕ್ಚರರ್
೧.	ಸರ್ಕಾರಿ ಕಾಲೇಜು	೫	೧೫	೭೩
೨.	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಯಾದಗಿರಿ	—	೬	೧೭
೩.	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಜೇವರ್ಗಿ	—	೧	೭
೪.	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಷಹಪುರ	—	೧	೬
	ಒಟ್ಟು	೫	೨೩	೧೦೩

ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಷಹಪುರ.

ಈ ಕಾಲೇಜು ಈಗ ತಾನೆ ಪ್ರಾರಂಭವಾಗಿರುವುದರಿಂದ ಅಲ್ಲಿನ ಭೋಧಸ ಕಾರ್ಯಭಾರ ಗೊತ್ತಾಗಿರುವುದಿಲ್ಲ. ಅಲ್ಲಿನ ಪ್ರಾಚಾರ್ಯರ ವರದಿ ಬಂದ ನಂತರ ಬೇಕಾದ ಶಿಕ್ಷಕರನ್ನು ನೇಮಿಸಲಾಗುವುದು.

ಕ್ರಮ ಸಂಖ್ಯೆ	ಕಾಲೇಜುಗಳು	ಪ್ರೊಫೆಸರ್	ರೀಡರ್	ಲೆಕ್ಚರರ್	ಸ್ಥಳೀಯ ಅಭ್ಯರ್ಥಿಗಳು
೧.	ಸರ್ಕಾರಿ ಕಾಲೇಜು ಗುಲ್ಬರ್ಗಾ	೩	೩	೫೨	೯
೨.	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಯಾದಗಿರಿ	—	೧	೩	೭
೩.	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಜೀವರ್ಗಿ	—	೧	೧	—

ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಷಹಪುರ.

ಸದ್ಯಕ್ಕೆ ಈ ಕಾಲೇಜಿಗೆ ಗುಲ್ಬರ್ಗದಿಂದ ಒಬ್ಬರು ಹಿರಿಯ ಶಿಕ್ಷಕರನ್ನು ಮತ್ತು ಒಬ್ಬ ಗುಮಾಸ್ತನನ್ನು ಈ ಕಾಲೇಜು ಪ್ರಾರಂಭಿಸಲು ಕಳುಹಿಸಲಾಗಿದೆ. ಬೇಕಾದ ಸಿಬ್ಬಂದಿ ಹಾಗೂ ಶಿಕ್ಷಕರನ್ನು ನೇಮಿಸಲು ಅವರ ವರಧಿ ಬಂದ ನಂತರ ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಕೆ. ಬಿ. ಷಾಣಪ್ಪ.—ಸ್ವಾಮಿ, ಜೀವರ್ಗಿ ಮತ್ತು ಷಹಪುರದಲ್ಲಿ ಒಂದೊಂದು ಡಿಗ್ರಿ ಕಾಲೇಜುಗಳನ್ನು ಕೊಟ್ಟಿದ್ದೇವೆಂದು ಹೇಳಿದ್ದೀರಿ. ಡಿಗ್ರಿ ಕಾಲೇಜುಗಳನ್ನು ಕೊಡುವಾಗ ಇಂತಿಷ್ಟೇ ವಿದ್ಯಾರ್ಥಿಗಳ ಸಂಖ್ಯೆ ಇರಬೇಕೆಂದು ವಿದ್ಯಾಭ್ಯಾಸ ಇಲಾಖೆಯಲ್ಲಿ ಏನಾದರೂ ನಿಯಮ ಇದೆಯೇ ? ಒಂದೊಂದು ಕಾಲೇಜಿನಲ್ಲಿ ಎಷ್ಟೆಷ್ಟು ವಿದ್ಯಾರ್ಥಿಗಳಿದ್ದಾರೆ ?

ಅಧ್ಯಕ್ಷರು.—ವಿದ್ಯಾರ್ಥಿಗಳ ವಿಷಯ ಇಲ್ಲಿ ಇಲ್ಲ. ಇಲ್ಲಿರತಕ್ಕದ್ದು ಅಧ್ಯಾಪಕರ ವಿಚಾರ.

ಶ್ರೀ ಕೆ. ಬಿ. ಷಾಣಪ್ಪ.—ಅಧ್ಯಾಪಕರನ್ನು ಕೊಡುವಾಗ ವಿದ್ಯಾರ್ಥಿಗಳು ಎಷ್ಟು ಇರಬೇಕೆಂದು ಇರುತ್ತದೆ, ಅದನ್ನಾದರೂ ಹೇಳಬಹುದಲ್ಲ.

ಶ್ರೀ ಬಿ. ರಾಚಯ್ಯ.—ಈ ಪ್ರಶ್ನೆ ಇಲ್ಲಿ ಉದ್ಭವಿಸುವುದಿಲ್ಲ.

ಒಬ್ಬ ಮಾನ್ಯ ಸದಸ್ಯರು.—ಸ್ವಾಮಿ, ಜೀವರ್ಗಿಯಲ್ಲಿ ಕಳೆದಸಾರಿ ಒಂದು ಡಿಗ್ರಿ ಕಾಲೇಜು ಮಂಜೂರಾಗಿದೆ. ಷಹಪುರದಲ್ಲಿ ಈ ವರ್ಷ ಪ್ರಾರಂಭವಾಗಿದೆ. ಜೀವರ್ಗಿ ಕಾಲೇಜಿನಲ್ಲಿ ಕೇವಲ ೧೦೦ ಜನ ವಿದ್ಯಾರ್ಥಿಗಳಿದ್ದಾರೆ, ಅಲ್ಲಿಗೆ ಸಿಬ್ಬಂದಿಯನ್ನು ಕೊಟ್ಟಿದ್ದೀರಿ. ಷಹಪುರದಲ್ಲಿ ಇನ್ನೂ ವಿದ್ಯಾರ್ಥಿಗಳೇ ಬಂದಿಲ್ಲ. ಇವತ್ತು ಜೀವರ್ಗಿ ಕಾಲೇಜಿನಲ್ಲಿ ಕನಿಷ್ಠ ವಿದ್ಯಾರ್ಥಿಗಳ ಸಂಖ್ಯೆ ಇಲ್ಲದ್ದಿದ್ದರೂ ಇದನ್ನು ಮುಂದುವರಿಸುತ್ತೀರಾ, ಅಥವಾ ವಜಾ ಮಾಡುತ್ತೀರಾ ?

ಶ್ರೀ ಬಿ. ರಾಚಯ್ಯ.—ಈಗ ಅಂಥ ಸಂದರ್ಭಗಳು ಬರುತ್ತಿವೆ. ಕಳೆದ ವರ್ಷ ಕೊಟ್ಟಿರುವುದು ಕೆಲವು ಇವೆ. ಎಲ್ಲೆಲ್ಲಿ ವಿದ್ಯಾರ್ಥಿಗಳ ಕನಿಷ್ಠ ಸಂಖ್ಯೆ ಇಲ್ಲ, ಅಂಥಾದ್ದನ್ನು ಪುನರ್ ಪರಿಶೀಲಿಸ ಬೇಕಾಗುತ್ತದೆ.

ಶ್ರೀ ಕೆ. ಬಿ. ಷಾಣಪ್ಪ.—ರೋಸ್ಟರ್ ಸಿಸ್ಟಂನ್ನು ಅನುಸರಿಸಿ ಮಾಡುತ್ತಿದ್ದೀರಾ ?

ಶ್ರೀ ಬಿ. ರಾಚಯ್ಯ.—ಒಬ್ಬನೇ ಇಸಪಿಯಿಂದ ಈಚೆಗೆ ಸರ್ಕಾರೀ ಆದೇಶವನ್ನು ಜಾರಿಗೆ ತರಬೇಕೆಂದು ಆದೇಶ ಕೊಟ್ಟಿದ್ದೇವೆ.

ಶ್ರೀ ಕೆ. ಬಿ. ಷಾಣಪ್ಪ.—ನಾವು ನೋಡಿದಹಾಗೆ ಅನೇಕ ಕಡೆಗಳಲ್ಲಿ ರೋಸ್ಟರ್ ಸಿಸ್ಟಂ ಇಲ್ಲ. ಜನರಲ್ ಮೆರಿಟ್ ಎಂದು ತೆಗೆದುಕೊಳ್ಳುತ್ತಿದ್ದಾರೆ.

ಅಧ್ಯಕ್ಷರು.—ಇದು ಗುಲ್ಬರ್ಗಾಕ್ಕೆ ಸೀಮಿತವಾದ ಪ್ರಶ್ನೆ. ಇವತ್ತು ಅಧ್ಯಾಪಕರ ಹುದ್ದೆಯನ್ನು ತುಂಬಿದ್ದಾರೆಯೇ ಮತ್ತು ರೋಸ್ಟರ್ ಸಿಸ್ಟಂನ್ನು ಅನುಸರಿಸುತ್ತಿದ್ದಾರೆಯೇ ? ಎಂದು ಕೇಳುತ್ತಾ ಹೋದರೆ ಪ್ರಶ್ನೆ ಬಹಳ ದೊಡ್ಡದಾಗುತ್ತದೆ.

ಶ್ರೀ ಕೆ. ಬಿ. ಷಾಣಪ್ಪ.—ರೋಸ್ಟರ್ ಸಿಸ್ಟಂನ್ನು ಪ್ರಾರಂಭಮಾಡಿದಮೇಲೆ ಎಷ್ಟೆಷ್ಟು ಉಪಾಧ್ಯಾಯರಿದ್ದಾರೆ ? ಅನೇಕ ಕಡೆಗಳಲ್ಲಿ ಬಂದೇ ಒಂದು ವರ್ಷಕ್ಕೆ ಉಪಾಧ್ಯಾಯರನ್ನು ತೆಗೆದು ಕೊಂಡು ಆ ಮೇಲೆ ಅವರನ್ನು ಮನೆಗೆ ಕಳುಹಿಸುತ್ತಾರೆ. ಇವರ ಬಗ್ಗೆ ಸರ್ಕಾರದವರು ಏನು ಹತೋಟಿಯನ್ನು ಇಟ್ಟುಕೊಂಡಿದ್ದಾರೆ ?

ಅಧ್ಯಕ್ಷರು.—ಇದಕ್ಕೆ ತಾವು ಬೇರೆ ಪ್ರಶ್ನೆಯನ್ನು ಕಳುಹಿಸಿದರೆ ಸಚಿವರು ಉತ್ತರ ಕೊಡುತ್ತಾರೆ.

ಶ್ರೀ ಬಿ. ರಾಚಯ್ಯ.—ಮಾನ್ಯ ಅಧ್ಯಕ್ಷರೆ, ನಾನು ಹೇಳಬೇಕಾದ ಉತ್ತರವನ್ನು ತಾವೇ ಹೇಳಿರುವುದರಿಂದ ಮತ್ತೆ ನಾನು ಉತ್ತರವನ್ನು ಹೇಳುವುದು ಅನವಶ್ಯಕ.

ಸವಣೂರಿನಲ್ಲಿ ಪ್ರಥಮ ದರ್ಜೆ ಸರ್ಕಾರಿ ಕಾಲೇಜನ್ನು ಪ್ರಾರಂಭಿಸುವುದು

೨೮೫ (೫೨) ಶ್ರೀ ಎಂ.ಎಂ. ನಡಾಫ್ (ಶಿಗ್ಗಾಂವ್).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಸರ್ಕಾರವು ಹೋದ ವರ್ಷ ತೀರ್ಮಾನ ಕೈಕೊಂಡು ೧೯೮೨-೮೩ನೇ ಸಾಲಿನಲ್ಲಿ ಧಾರವಾಡ ಜಿಲ್ಲೆಯ ಸವಣೂರಿನಲ್ಲಿ ಪ್ರಥಮ ದರ್ಜೆ ಕಾಲೇಜು ಸ್ಥಾಪಿಸಲು ತೀರ್ಮಾನಿಸಲಾಗಿತ್ತೆ?

ಆ) ಸರ್ಕಾರವು ಈ ವರ್ಷದಲ್ಲಿ ಅನೇಕ ಪ್ರಥಮ ದರ್ಜೆ ಕಾಲೇಜುಗಳನ್ನು ಸ್ಥಾಪಿಸುವಂತೆ, ಕ್ರಮ ತೆಗೆದು ಕೊಂಡಿದೆಯೇ?

ಇ) ಸರ್ಕಾರವು ಈ ವರ್ಷವಾದರೂ ಸವಣೂರಿನಲ್ಲಿ ಪ್ರಥಮ ದರ್ಜೆ ಕಾಲೇಜು ಸ್ಥಾಪಿಸಲು ಕ್ರಮ ಕೈಗೊಳ್ಳುವುದೇ?

ಶ್ರೀ ಬಿ. ರಾಚಯ್ಯ (ಮಾನ್ಯ ಶಿಕ್ಷಣ ಮಂತ್ರಿಗಳು).—

ಅ) ೧೯೮೨-೮೩ನೇ ಸಾಲಿನಲ್ಲಿ ತೆಗೆದುಕೊಂಡ ತೀರ್ಮಾನದಂತೆ ೧೯೮೩-೮೪ನೇ ಸಾಲಿನಲ್ಲಿ ಸವಣೂರಿನಲ್ಲಿ ಪ್ರಥಮ ದರ್ಜೆ ಕಾಲೇಜು ಸ್ಥಾಪಿಸಬೇಕಾಗಿತ್ತು.

ಆ) ಹೌದು-ಲ

ಇ) ಅರ್ಜಿಯನ್ನು ತಡವಾಗಿ ಸಲ್ಲಿಸಿದ್ದರಿಂದ ಕರ್ನಾಟಕ ವಿಶ್ವವಿದ್ಯಾಲಯವು ೧೯೮೩-೮೪ನೇ ಸಾಲಿಗಾಗಿ ಈ ಅರ್ಜಿಯನ್ನು ಪರಿಗಣಿಸಿ ಸಂಯೋಜನೆಯ ಶಿಫಾರಸನ್ನು ಕೊಡಲಾಗಲಿಲ್ಲ ಆದುದರಿಂದ ಈ ವರ್ಷ ಇದು ಸಾಧ್ಯವಿಲ್ಲ.

ಶ್ರೀ ಎಂ.ಎಂ. ನಡಾಫ್.—ಮಾನ್ಯ ಅಧ್ಯಕ್ಷರೇ ನನ್ನ ಆ ಪ್ರಶ್ನೆಗೆ ಉತ್ತರವಾಗಿ ಎಂಟು ಕಾಲೇಜುಗಳನ್ನು ಈ ವರ್ಷವೇ ಆರಂಭ ಮಾಡಲು ಸರ್ಕಾರದವರು ಏರ್ಪಾಡು ಮಾಡಿದ್ದಾರೆಂದು